VI. ಚಿಕ್ಕೋಡಿಯಲ್ಲಿ ಸರ್ಕಾರದ ಧನ ಸಹಾಯದಿಂದ ನಡೆಯುತ್ತಿರುವ ಬಿ. ಎಡ್. ಕಾಲೇಜಿನ ಕಟ್ಟಡದ ನಿರ್ಮಾಣಕ್ಕಾಗಿ ಹಣ ಸಂಗ್ರಹಿಸುತ್ತಿರುವುದು.

ಶ್ರೀ ಬಿ. ಸ್ವಾಮಿರಾವ್.— ಅಧ್ಯಕ್ಷರೇ, ಚಿಕ್ಕೋಡಿಯಲ್ಲಿ ಸರಕಾರದ ಧನಸಹಾಯದಿಂದ ನಡೆಸುತ್ತಿರುವ ಬಿ. ಎಡ್. ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಧನ ಸಂಗ್ರಹಿಸುತ್ತಿರುವ ಸಲುವಾಗಿ ಮಂಹೇಶ್‌ಕುಮಾರ್ ಮತ್ತು ಸಂಗಡಿಗರಿಂದ ಪಾರ್ಟಿ ನಡೆಸುವ ಸಂದರ್ಭದಲ್ಲಿ ಟಿಕೆಟ್ಟುಗಳನ್ನು ವಾರಾಟ ಮಾಡಲು ಅಧಿಕಾರಿಗಳ ಮೇಲೆ ಒತ್ತಡ ತಂದಿದ್ದು ಜನತಾ ಪಾರ್ಟಿಯ ಕಾರ್ಯಕರ್ತರೊಬ್ಬರು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಿಗೆ ತಿಳಿಸಿರುವುದಾಗಿ ತಿಳಿದುಬಂದಿದ್ದು, ಸರಕಾರದವರು ಕೂಡಲೇ ಸಂಗ್ರಹಣೆಯನ್ನು ನಿಲ್ಲಿಸುವಂತೆ ಆಜ್ಞೆ ಮಾಡುವುದಲ್ಲದೆ ಈ ಬಗ್ಗೆ ತನಿಖೆ ನಡೆಸಬೇಕೆಂದೂ ಮಾನ್ಯ ಶಿಕ್ಷಣ ಮಂತ್ರಿಗಳು ಈ ಬಗ್ಗೆ ಸದನಕ್ಕೆ ಹೇಳಿಕೆ ನೀಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತಂದು ಉತ್ತರವನ್ನು ಕೊಡುವುದಕ್ಕೆ ಅವರಿಗೆ ಹೇಳಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ನಡೆದ ಚರ್ಚೆಗೆ ಉತ್ತರ.

ಅಧ್ಯಕ್ಷರು.— ಈಗ ರಾಜ್ಯಪಾಲರ ಭಾಷಣದ ಮೇಲೆ ಆದ ಚರ್ಚೆಗೆ ಮಾನ್ಯ ಜೆ. ಹೆಚ್. ಪಟೇಲ್ ಅವರು ಉತ್ತರವನ್ನು ನೀಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಕೈಗಾರಿಕಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಅರ್ಪಿಸುವ ಕಾಲದಲ್ಲಿ ಸದನದ ಮುಂದೆ ಈಗಾಗಲೇ ಸಾಕಷ್ಟು ಚರ್ಚೆಗಳನ್ನು ಮಾಡಿದ್ದಾರೆ. ಸುಮಾರು ಎಂಟು ದಿನಗಳ ಕಾಲ ಈ ಭಾಷಣದ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದ್ದು ಬಹಳ ಜನರು ಈ ಭಾಷಣಕ್ಕೆ ವಂದನೆಯನ್ನು ಸಲ್ಲಿಸಿದ್ದಾರೆ. ಕೆಲವರು ಭಾಷಣವನ್ನು ನಿಂದಿಸಿದ್ದಾರೆ. ಇನ್ನು ಕೆಲವರು ಯಾವುದೇ ಅಭಿಪ್ರಾಯವನ್ನೂ ಸ್ಪಷ್ಟವಾಗಿ ಹೇಳದೇ ಇರಶಕ್ಕವರೂ ಇದ್ದಾರೆ. ಎಂದರೆ ನ್ಯೂಟ್ರಲ್ ಆಗಿ ಇದ್ದಾರೆ. ಆದುದರಿಂದ ನಾನು ಮೊದಲನೆಯದಾಗಿ ಪ್ರಾಸ್ತಾವಿಕವಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಂದ ಹಿಡಿದೂ ಹಲವಾರು ಹಿರಿಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ಸಾಮಾನ್ಯ ವಿಷಯದ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಬೇಕಾಗುತ್ತದೆ. ನೇರವಾಗಿ ಕೆಲವು ಅಂಶಗಳನ್ನು ನಾನು ಚರ್ಚೆಗೆ ತೆಗೆದುಕೊಳ್ಳುವುದಕ್ಕಿಂತಲೂ ಮುಂಚೆ ಅವರು ಮಾಡಿದ ಕೆಲವು ಅಂಶಗಳು, ಹೇಳಿದ ಕೆಲವು ವಿಚಾರಗಳು ಏನೆಂದರೆ, ರಾಜ್ಯಪಾಲರು ಇಂಡಿಪೆಂಡೆಂಟಾಗಿ ಅವರೇ ಭಾಷಣವನ್ನು ಮಾಡಬಹುದಾಗಿತ್ತು ಎಂದು ಹೇಳಿದರು. ಮಾನ್ಯ ರಾಜ್ಯಪಾಲರು ಈ ಸರ್ಕಾರದ ಪರವಾಗಿ ಭಾಷಣ ಮಾಡಿದ್ದಾರೆಂದು ಮಾನ್ಯ ವೀರಪ್ಪ ಮೊಯ್ಲಿ ಅವರು ಹೇಳಿದರು. ಇದು ರಾಜ್ಯಾಂಗದಲ್ಲಿ ನಡದು ಬಂದಿರತಕ್ಕ ಒಂದು ಸಂಪ್ರದಾಯ. ಅದನ್ನು ಕರ್ನಾಟಕದಲ್ಲಿ ಬೇರೆ ಮಾಡಬೇಕೆಂದೇನೂ ಕಾರಣ ನನಗೆ ತಿಳಿದಿಲ್ಲ. ಅವರ ಮಾತಿನ ಹಿನ್ನೆಲೆಯಲ್ಲಿ ಏನಿತ್ತೆಂದರೆ, ರಾಜ್ಯಪಾಲರು ಇವರಿಗೇ ಸೇರಿದವರು, ಸರ್ಕಾರ ನವ್ಮದು ಎನ್ನುವ ಹಾಗೆ ರಾಜ್ಯಪಾಲರು ಇವರಿಗೆ ಸೋತುಬಿಟ್ಟ ಹಾಗೆ ಏನೋ ಹೇಳುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಹಾಗೆ ಮಾಡುವುದಕ್ಕಾಗುವುದಿಲ್ಲ. ರಾಜ್ಯದಲ್ಲಿ ಜನತಾ ಪಾರ್ಟಿ ಅಧಿಕಾರದಲ್ಲಿ ಇರಲಿ, ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರಲಿ, ಕಮ್ಯುನಿಸ್ಟ್ ಪಕ್ಷ ಅಧಿಕಾರದಲ್ಲಿರಲಿ ಯಾವ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇರುತ್ತದೆಯೋ ಆ ಸರ್ಕಾರದ ಅನುಭವಗಳನ್ನು, ಆ ಸರ್ಕಾರದ ನೀತಿಯನ್ನು ಆ ರಾಜ್ಯದ ರಾಜ್ಯಪಾಲರು ಸದನದ ಮುಂದೆ ಇಡತಕ್ಕದ್ದು ಸಂವಿಧಾನವಾಗಿ ಬಂದಿರತಕ್ಕ ರೀತಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅರ್ಥ ಇಲ್ಲ, ಆದರಲ್ಲಿ ಏನಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅದಕ್ಕೆ ನಾನು ಹೇಳುವುದು ಇಷ್ಟೇ. ರಾಜ್ಯದ ಆಪೈತ್ತಿನ ಸ್ಥಿತಿ ಏನಿತ್ತು ? ಪ್ರತಿಯೊಂದು ವರ್ಷದಲ್ಲೂ ರಾಜ್ಯಪಾಲರು ಭಾಷಣ ಮಾಡುವಾಗ ರಾಜ್ಯದಲ್ಲಿ ಸ್ಥಿತಿಗತಿ ಏನು ಎಂಬುದನ್ನು ಮೊದಲು ಆದ್ಯತೆ ಕೊಟ್ಟು ಹೇಳುತ್ತಾರೆ. ಯಾವುದಾದರೂ ಒಂದು ವಿಷಯವನ್ನು, ಏನಾದರೂ ಸರ್ಕಾರದ ನೀತಿಯನ್ನು